ನಾನು ಇದರ ಬಗ್ಗೆ ಬಹಳಷ್ಟು ಸ್ಟಡಿ ಮಾಡಿ ನೋಡಿದ್ದೇನೆ. ಈಗ ಇರತಕ್ಕ ತಂತ್ರಜ್ಞಾನದಲ್ಲಿ ನೀರಿದ್ದಾಗ ಹೂಳನ್ನು ತೆಗೆಯುವ ತಂತ್ರಜ್ಞಾನ ಇಲ್ಲ. ಆ ಹೂಳನ್ನು ಲಾರಿಗಳಲ್ಲಿ ಸಾಗಾಣಿಕೆ ಮಾಡುವುದು ಅಸಾಧ್ಯವಾದುದು. ಆದ್ದರಿಂದ ಇಲ್ಲಿ ಬೇರೆ ಪದ್ಧತಿಯಿಂದ ಆ ಹೂಳನ್ನು ಬೇರೆ ಕಡೆಗೆ ಸಾಗಾಣಿಕೆ ಮಾಡಲು ಸಾಧ್ಯತೆ ಇದೆಯೇ ಎಂಬ ಬಗ್ಗೆ ಪ್ರಪಂಚದ ಮಟ್ಟದಲ್ಲಿ ಅಧ್ಯಯನ ಮಾಡಬೇಕಾಗಿದೆ. ಇದನ್ನು ಮೈನರ್ ಇರಿಗೇಷನ್‌ನಲ್ಲಿ ಮಾಡುತ್ತೇವೆ ಎಂಬುದಕ್ಕಿಂತ ಇಂಥ ದೊಡ್ಡ ಕೆರೆ ಹೂಳನ್ನು ತೆಗೆಯಲು ಬೇರೆ ಯಾವುದಾದರೂ ಒಂದು ವಿಶೇಷವಾದ ಅಂಗ ರಚನೆಯಾಗಬೇಕು ಎಂಬುದು ಸರ್ಕಾರಕ್ಕೆ ನನ್ನ ಸಲಹೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಬಂದರುಗಳಲ್ಲಿ ಹೂಳು ತುಂಬಿದಂಥ ಪ್ರದೇಶ ಬಂದಾಗ dredger ಗಳನ್ನು ಉಪಯೋಗಿಸಿಕೊಳ್ಳುವಂಥದ್ದು ಒಂದು ಸಹಜವಾದಂಥ ರೀತಿ. ಆದರೆ ಈಗ dredger ಗಳನ್ನು ಇಲ್ಲಿ ಉಪಯೋಗಿಸಲಿಕ್ಕೆ ಬರುವುದಿಲ್ಲ. ಅವರು ಹೇಳಿದಂತೆ 133 ಟಿ.ಎಂ.ಸಿ ನೀರನ್ನು ಹಿಡಿದಿಡುವಂಥ ಸಾಮರ್ಥ್ಯದ ತುಂಗಭದ್ರ ಅಣೆಕಟ್ಟಿನ ಸಾಮರ್ಥ್ಯ ಇವತ್ತು 108 ಟಿ.ಎಂ.ಸಿ ಸಾಮರ್ಥ್ಯಕ್ಕೆ ಬಂದಿದೆ. ಆ ಹೂಳನ್ನು ಕೆಳಗಡೆಯವರೆಗೆ ಕೊರೆದು ಅದನ್ನು ಬ್ಲಾಸ್ಟ್ ಮಾಡಿ ಕಾಲುವೆಗಳ ಮೂಲಕ ಬಿಡಬೇಕು ಎನ್ನುವಂಥ ಕೆಳಗಡೆಯವರೆಗೆ ಕೊರೆದು ಅದನ್ನು ಬ್ಲಾಕ್ಸ್ ಮಾಡಿ ಕಾಲುವೆಗಳ ಮೂಲಕ ಬಿಡಬೇಕು ಎನ್ನುವಂಥ ಸಲಹೆ ಬಂದಿತ್ತು. ಆದರೆ ಅದು ಆರ್ಥಿಕವಾಗಿ ಸರಿಯಾಗುವಂಥದಲ್ಲ. ಮತ್ತು ಕಾಲುವೆಯಲ್ಲಿ ಹೂಳು ತುಂಬುವುದರಿಂದ ಅದನ್ನು ಎತ್ತಲಿಕ್ಕೂ ಸಾಧ್ಯವಾಗುವುದಿಲ್ಲ ಎನ್ನತಕ್ಕದ್ದು ಇದೆ. ಈ ಕಾರಣಕ್ಕಾಗಿಯೇ ವಿಶೇಷವಾದಂಥ ಒಂದು ಯೋಜನೆಯನ್ನು ರೂಪಿಸಬೇಕು ಎಂಬುದಕ್ಕೆ ಸರ್ಕಾರದವರು ಒಪ್ಪುತ್ತೇವೆ. ಆದರೆ ಅದಕ್ಕಿಂತ ಹೆಚ್ಚಾಗಿ ಮಾನ್ಯ ಅಂಗಡಿಯವರು ಇಂಥ ವಿಚಾರದಲ್ಲಿ ಒಂದು ಹೊಸ ನೀತಿಯನ್ನು ಪ್ರಕಟಣೆ ಮಾಡಿದ್ದರು. ಅವರು ನಮ್ಮ ನಿವೃತ್ತ ಮುಖ್ಯ ಇಂಜಿನಿಯರ್ ಆಗಿದ್ದರು, ಒಬ್ಬ ಒಳ್ಳೆಯ ಇಂಜಿನಿಯರ್ ತಜ್ಞರಾಗಿದ್ದರು. ಅವರು ಇತ್ತೀಚೆಗೆ ಗತಿಸಿದ್ದಾರೆ. ಅವರ ಬಗ್ಗೆ ಸದನ ಸಹ ಸಂತಾಪ ಸೂಚನೆಯನ್ನು ಮಾಡಿತ್ತು. ಹೂಳನ್ನು ತೆಗೆಯುವುದರ ಬದಲು ಏರಿಯನ್ನು ಎತ್ತರಿಸುವಂಥದ್ದು ಎಂದು ಅಲ್ಲಿಯ ಜ್ಞಾನದ ವಿಚಾರದಿಂದ ಅವರು ಹೇಳಿದ್ದರು. ಏರಿಯನ್ನು ಎತ್ತರಿಸುವುದರ ಮೂಲಕ ನೀರನ್ನು ಹಿಡಿದಿಡುವ ಸಾಮರ್ಥ್ಯ ಹೆಚ್ಚಾಗುತ್ತದೆ, ಅದನ್ನು ನೀವು ಪರಿಶೀಲಿಸಬೇಕು ಎಂಬ ಮಾತನ್ನು ಅವರು ಹೇಳಿದ್ದಾರೆ. ವಿಶ್ವಬ್ಯಾಂಕ್ ಯೋಜನೆಯಿಂದ ಹೆಚ್ಚು ಹಣವನ್ನು ಪಡೆದು ಈಗ ತಾತ್ಕಲಿಕವಾಗಿ ಏರಿಯನ್ನು ಎತ್ತರಿಸುವ ಮೂಲಕ ನೀರನ್ನು ಹಿಡಿದಿಡುವ ಸಾಮರ್ಥ್ಯವನ್ನು ಹೆಚ್ಚು ಮಾಡತಕ್ಕ ಕೆಲಸನವನ್ನು ನಾವು ಮಾಡಬಹುದು.

ವಿಷಯ : ಕುದುರೆಮುಖ ವ್ಯಾಪ್ತಿಯ ರಾಷ್ಟ್ರೀಯ ಉದ್ಯಾನವನದ ಯೋಜನೆ

ಶ್ರೀ ಎಂ.ಪಿ. ಕುಮಾರ್ ಸ್ವಾಮಿ (ಮೂಡಿಗೆರೆ) : ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಕುದುರೆಮುಖ ವ್ಯಾಪ್ತಿಯ ರಾಷ್ಟ್ರೀಯ ಉದ್ಯಾನವನದ ಯೋಜನೆ ಸರ್ಕಾರದಲ್ಲಿರುವದರಿಂದ, ಅಲ್ಲಿ ಈಗಾಗಲೇ ಕುದುರೆಮುಖ ಕಂಪನಿ ಮಾಡಬೇಕಾದರೆ ಒಮ್ಮೆ ಅಲ್ಲಿನ ನಿವಾಸಿಗಳನ್ನೆಲ್ಲಾ ಸ್ಥಳಾಂತರ ಮಾಡಲಾಗಿದೆ. ಮತ್ತೆ ಈಗ ರಾಷ್ಟ್ರೀಯ ಉದ್ಯಾನವನವನ್ನು ಮಾಡುತ್ತೇವೆಂದು ಮತ್ತೆ ಅಲ್ಲಿನ ನಿವಾಸಿಗಳನ್ನು ಏಳಿಸಬೇಕಾಗುತ್ತದೆ. ಇದರಿಂದ ಸುಮಾರು ಎರಡು ತಲೆಮಾರಿನ ಜನಗಳಿಗೆ ತೊಂದರೆಯಾಗುತ್ತಿದೆ. ಅಲ್ಲಿ ಈಗ ಏನು ಜನರು ವಾಸವಿದ್ದಾರೆ ಅವರಿಗೆ ಸರ್ಕಾರದ ವತಿಯಿಂದ ಅಲ್ಲೇ ನಿವೇಶನದ ಹಕ್ಕುಪತ್ರವನ್ನು ಕೊಡುವ ವ್ಯವಸ್ಥೆ ಮಾಡಿದರೆ ಅವರ ಜೀವನಕ್ಕೆ ಅನುಕೂಲವಾಗುತ್ತದೆ.

ಅಲ್ಲೇ ಸಾಗುವಳಿ ಹಕ್ಕುಪತ್ರವನ್ನು ಕೊಡಬೇಕೆಂದು ನಾನು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ಹಿಂದಿನ ಜಿಲ್ಲಾಧಿಕಾರಿಗಳಾಗಿದ್ದ ಮಾನ್ಯ ಗೋಪಾಲಕೃಷ್ಣಗೌಡರು ಒಂದು ಆಜ್ಞೆಯನ್ನು ಹೊರಡಿಸಿ ಒಂದು ಲಕ್ಷದ ಇಪ್ಪತ್ತೆಂಟು ಸಾವಿರ ಎಕರೆ ಜಮೀನನ್ನು ಅರಣ್ಯ ಇಲಾಖೆಗೆ ವರ್ಗಾಯಿಸಿದರು. ಅದರಿಂದ ಅನೇಕ ಪಟ್ಟಣಗಳು, ಕಳಸದಂಥ ಪಟ್ಟಣಗಳು, ಇವತ್ತು ಅರಣ್ಯ ಇಲಾಖೆಯ ಕಾನೂನು ಅನೇಕ ಊರುಗಳನ್ನು ಪಟ್ಟಣಗಳನ್ನು ನುಂಗುವಂಥ ಪರಿಸ್ಥಿತಿ ಬಂದಿದೆ. ದಯಮಾಡಿ ಅದು ಆ ರೀತಿ ಆಗಬಾರದು. ಅದು ಪುನ ಕಂದಾಯ ಇಲಾಖೆಗೆ ವರ್ಗ ಆಗಬೇಕೆಂದು ಸರ್ಕಾರಕ್ಕೆ ಆ ಕ್ಷೇತ್ರದ ಪ್ರತಿನಿಧಿಯಾಗಿ ನಾನು ಮನವಿಯನ್ನು ಮಾಡುತ್ತೇನೆ. ಎರಡನೆಯದಾಗಿ ಸಾಮಾಜಿಕ ಸಮಸ್ಯೆ ನಕ್ಸಲಿಯರ ಸಮಸ್ಯೆಯನ್ನು ನಮ್ಮ ಸ್ನೇಹಿತರೊಬ್ಬರು ಪ್ರಸ್ತಾಪ ಮಾಡಿದ್ದಾರೆ. ಬಂದೂಕು ಮತ್ತು ಮದ್ದುಗುಂಡುಗಳು-ಪೊಲೀಸರಿಗೆ ಮಾತ್ರ ಬೇಗನೆ ಹೋಗುತ್ತವೆ, ಆದರೆ ಸಾಮಾಜಿಕ ಸಮಸ್ಯೆಯನ್ನು ಬಗೆಹರಿಸಲು ಏಕೆ ಪರಿಹಾರ ಅಲ್ಲಿಗೆ ಬೇಗನೆ ಹೋಗುವುದಿಲ್ಲ? ಅಷ್ಟೇ ತ್ವರಿತವಾಗಿ ಪರಿಹಾರದ ಹಣವೂ ಅಲ್ಲಿಗೆ ಹೋಗಬೇಕು. ಕೇವಲ ಮದ್ದು ಗುಂಡುಗಳು ಬೇಗನೆ ಪೊಲೀಸರಿಗೆ ಹೋದರೆ ಆ ಸಮಸ್ಯೆ ಪರಿಹಾರವಾಗುವುದಿಲ್ಲ. ಅನಂತರ ಕಾಫಿ ತೋಟದ ಕಾರ್ಮಿಕರಿಗೆ ಹಳದಿ ಕಾರ್ಡುಗಳನ್ನು ವಿತರಣೆ

1.00 ಪಿಎಂ

ಮಾಡಬೇಕು ಎಂಬ ಬಗ್ಗೆ ಬಹಳ ಚರ್ಚೆಯಾಗುತ್ತಿದೆ. ಆದ್ದರಿಂದ ಆ ಕಾರ್ಮಿಕರಿಗೆ ಹಳದಿ ಕಾರ್ಡುಗಳನ್ನು ವಿತರಣೆ ಮಾಡಬೇಕೆಂದು ಸರ್ಕಾರಕ್ಕೆ ಮನವಿ ಮಾಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಈ ವಿಚಾರದಲ್ಲಿ ದೀರ್ಘವಾದ ಉತ್ತರವನ್ನು ಸರ್ಕಾರದ ಪರವಿಯಿಂದ ಕೊಟ್ಟಿದ್ದೇವೆ. ರಾಷ್ಟ್ರೀಯ ಉದ್ಯಾನವನಕ್ಕೆ ಕೇಂದ್ರ ಸರ್ಕಾರದ ಕಾನೂನು ಇದೆ. ಅದರನ್ವಯ ರಾಷ್ಟ್ರೀಯ ಉದ್ಯಾನವನಗಳೆಂದು ಎಲ್ಲೆಲ್ಲಿ ಬರುತ್ತದೆ ಅಲ್ಲಿರುವಂಥ ಜನವಸತಿಯನ್ನು ಸ್ಥಳಾಂತರಗೊಳಿಸಬೇಕು ಎಂಬುದು ಆ ಕಾನೂನಿನ ಅಡಿಯಲ್ಲಿರುವ ವಿಷಯ. ಆದ್ದರಿಂದ ಆ ಗಡಿಪ್ರದೇಶಗಳಲ್ಲಿ, ಅಂದರೆ ರಾಷ್ಟ್ರೀಯ ಉದ್ಯಾನವನದ ಹೊರಗಡೆಯ ಗಡಿಪ್ರದೇಶದಲ್ಲಿ ಇರುವಂಥ ನಿವಾಸಿಗಳನ್ನು ಪುನರ್ವಸತಿ ಮಾಡಿಕೊಡತಕ್ಕ ಕ್ರಮವನ್ನು ಈಗಾಗಲೇ ಕೈಗೊಂಡಿದ್ದೇವೆ. ನೀವು ಈಗಾಗಲೇ ಪ್ರಸ್ತಾಪ ಮಾಡಿದಿರಿ, ಮಾನ್ಯ ಸದಸ್ಯರಾದಂಥ ಮಹಿಮಾಪಾಟೀಲರು, ಹಾಗೂ ರವಿಯವರು ಇದರ ಬಗ್ಗೆ ಪ್ರಸ್ತಾಪ ಮಾಡಿದರು. ಅಲ್ಲಿಯ ಗಣಿ ಕೈಗಾರಿಕೆಯಿಂದ ತುಂಗಾ ನದಿಯ ಮತ್ತು ತುಂಗಭದ್ರಾ ನದಿಯ ಮೂಲಗಳು ಬತ್ತಿಹೋಗಿ ಹೂಳು ತುಂಬುತ್ತಿದೆ ಎಂದು ಹೇಳಿದಾಗ, ಉದ್ಯಾನವನವನ್ನು ಕಾಪಾಡಿಕೊಳ್ಳಬೇಕಾದದ್ದು ನಮ್ಮ ಕರ್ತವ್ಯ. ಆ ಜೀವಸಂಕಲನವನ್ನು ಉಳಿಸಿಕೊಳ್ಳಬೇಕಾಗಿದ್ದರೆ ರಾಷ್ಟ್ರೀಯ ಉದ್ಯಾನವನ ಆಗತಕ್ಕದ್ದು ಅತ್ಯಂತ ಅದತ್ಯ. ಎರಡಕ್ಕೂ ವಿರೋಧ ಮಾಡಲು ಆಗುವುದಿಲ್ಲ. ಇದು ವಿರೋಧಾಭಾಸವಾದ ರೀತಿಯಾಗುತ್ತದೆ. ಆ ಕಾರಣಕ್ಕಾಗಿ ತಾವು ಸಂಪೂರ್ಣವಾದ ಸಹಕಾರವನ್ನು ಈ ವಿಚಾರದಲ್ಲಿ ಕೊಡಬೇಕು. ಉಳಿದಿರತಕ್ಕ ವಿಚಾರವೇನಿದೆ ಅದರ ಬಗ್ಗೆ ಸರ್ಕಾರ ತೀವ್ರವಾಗಿ, ನಕ್ಸಲಿಯರ ವಿಚಾರದಲ್ಲಿ ಬಂದಿರುವ ಪರಿಹಾರ ವಿಚಾರವೇನಿದೆ ಆ ಸಮಸ್ಯೆಯನ್ನು ಬಗೆಹರಿಸಲು ಸಂಪೂರ್ಣವಾದ ಗಂಭೀರವಾದ ಗಮನವನ್ನು ಸರ್ಕಾರ ಕೊಡುತ್ತದೆಂದು ಹೇಳುತ್ತೇನೆ.

ವಿಷಯ (ಪ) : ದೊಡ್ಡಬಳ್ಳಾಪುರ ಕ್ಷೇತ್ರದಲ್ಲಿ ಕುಡಿಯುವ ನೀರಿಗಾಗಿ ಟ್ರಾನ್ಸ್‌ಫಾರ್ಮರ್ ಒದಗಿಸುವ ಬಗ್ಗೆ

ಶ್ರೀ ಜಿ. ನರಸಿಂಹಸ್ವಾಮಿ (ದೊಡ್ಡಬಳ್ಳಾಪುರ) : ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಕೆ.ಪಿ.ಟಿ.ಸಿ.ಎಲ್. ನಿಂದ ಕುಡಿಯುವ ನೀರಿಗೆ ಒದಗಿಸುವಂಥ ಟ್ರಾನ್ಸ್‌ಫಾರ್ಮರ್ಸ್‌ನದ್ದು ಬಹಳ